**ಇಂದು ದಿನಾಂಕಃ 29-11-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ಗಂಗೂನಾಯಕ ರವರಿಗೆ ನಾನು ನೋಡಿದ್ದೇನೆ. ಗಂಗೂನಾಯಕ ರವರು ಒಟ್ಟು 6 ಜನ ಸಹೋದರರು. ನನ್ನ ಅಜ್ಜನ ಹೆಸರು ಹರ್ಜು. ಸಕ್ಕುನಾಯಕ ರವರು ಒಟ್ಟು 4 ಜನ ಸಹೋದರರು. ಸರ್ವೆ ನಂ. 90 ರ ಜಮೀನಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರಲ್ಲಿ ಯಾರಿಗೆ ಎಷ್ಟು ಹಿಸ್ಸಾ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 90 ರಲ್ಲಿ ಒಟ್ಟು 14 ಹಿಸ್ಸಾ ಇದೆ ಎಂದರೆ ಸರಿ. ಸರ್ವೆ ನಂ. 90 ರಲ್ಲಿ ಒಟ್ಟು 9 ಪಹಣಿಗಳು ಇದೆ ಎಂದರೆ ಸರಿ. ಸರ್ವೆ ನಂ. 90/1, 90/10 ಮತ್ತು 90/14 ರ ಜಮೀನುಗಳು ವಾದಿಯ ತಂದೆಗೆ ಬಂದಿರುತದೆ ಎಂದರೆ ಸರಿಯಲ್ಲ. ವಾದಿಯ ತಂದೆ ಹೆಸರು ಗಂಗೂ ಎಂದರೆ ಸರಿ. ಮೇಲೆ ಹೆಳಿರುವ ಜಮೀನುಗಳು ಬಿಟ್ಟು ವಾದಿಗೆ ಬೇರೆ ಹಿಸ್ಸಾಗೆ ಸಂಬಂಧ ಇಲ್ಲ ಎಂದರೆ ಸರಿ. ಮೇಲೆ ಹೇಳಿರುವ ಜಮೀನುಗಳು ವಾದಿಯ ತಂದೆ ತಮ್ಮ ಜೀವಿತ ಕಾಲದಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಂದೆ ತಮಗೆ ಬಂದಿರುವ ಒಂದು ಸರ್ವೆ ನಂಬರಿನ ಜಮೀನನ್ನು 1966-67 ರಲ್ಲಿ ಭೀಮಣ್ಣ ರವರಿಗೆ ಮತ್ತು ಎರಡು ಸರ್ವೆ ನಂ.ಗಳಲ್ಲಿರುವ ಜಮೀನು ಪಾಂಡುರಂಗ ತಂದೆ ಮಾನಯ್ಯ ರವರಿಗೆ 1970-71 ರಲಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ವಾದಿಯ ತಂದೆ ತನಗೆ ಬಂದ ಜಮೀನನ್ನು ಮಾರಾಟ ಮಾಡಿದ ನಂತರ ವಾದಿಯ ತಂದೆಗೆ ಮತ್ತು ವಾದಿಗೆ ಯಾವುದೇ ಜಮೀನು ಉಳಿದಿಲ್ಲ ಎಂದರೆ ಸರಿಯಲ್ಲ.

ಗಂಗೂನಾಯಕ ರವರಿಗೆ ಒಟ್ಟು 6 ಜನ ಮಕ್ಕಳು. ಅವರ ಹೆಸರು ದೇನು, ಕಾಳು, ಮಾಣು, ಭೀಮು, ರೇಕು ಮತ್ತು ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಗಂಗೂನಾಯಕ ರವರಿಗೆ ಎಷ್ಟು ಹೆಣ್ಣು ಮಕ್ಕಳು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಗಂಗೂನಾಯಕ ರವರ ಮಕ್ಕಳು ತಮ್ಮ ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ. ಗಂಗೂನಾಯಕ ರವರ ಮಕ್ಕಳಿಗೆ ಯಾರಿಗೆ ಎಷ್ಟು ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲ. ಗಂಗೂನಾಯಕ ರವರಿಗೆ ಒಟ್ಟು ಎಷ್ಟು ಸರ್ವೆ ನಂಬರಗಳಲ್ಲಿ ಜಮೀನು ಇತ್ತು ಎಂದು ನನಗೆ ಮಾಹಿತಿ ಇಲ್ಲ. ಗಂಗೂನಾಯಕ ರವರ ಮಕ್ಕಳು ಪಾಲು ಮಾಡಿಕೊಂಡು ಎಷ್ಟು ವರ್ಷಗಳಾಗಿವೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಆಗ ನಾನು 6 ವರ್ಷದ ವಯಸ್ಸಿನವನಾಗಿದ್ದೆ ಎಂದು ನುಡಿಯುತ್ತಾರೆ. ಸದರಿ ಪಾಲು ಮೌಖಿಕವಾಗಿ ಆಗಿದ್ದಾರೆ. ಸರ್ವೆ ನಂ. 90 ರಲಿ ಯಾರಿಗೆ ಎಷ್ಟು ಜಮೀನು ಬಂದಿದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ವಾದಿಗೆ ಬಂದಿದೆ ಎಂದು ನುಡಿಯುತ್ತಾರೆ. ಪಾಲುಗಾರಿಕೆಯಲ್ಲಿ ಸರ್ವೆ ನಂ. 90 ರ ಜಮೀನು ವಾದಿಗೆ ಬಂದಿದೆ ಎಂದು ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ಸರ್ವೆ ನಂ. 90 ರಲ್ಲಿ ವಾದಿಗೆ ಜಮೀನು ಬಂದಿದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅವರ ಜಮೀನಿನ ಪಕ್ಕದಲ್ಲೇ ಇರುವ ಕಾರಣ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ.

ದಾವಾ ಜಮೀನಿನ ಪೂರ್ವಕ್ಕೆ ಚಂದಯ್ಯ ರವರ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಾಲಾ ಇದೆ ಎಂದರೆ ಸರಿ. ದಕ್ಷಿಣಕ್ಕೆ ತುಳಜಾ ರವರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಚಂದಯ್ಯ ರವರ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಚೆಕ್ಕುಬಂದಿಯ ಜಮೀನನ್ನು ಗಂಗೂನಾಯಕ ರವರು 1970-71 ರಲ್ಲಿ ಪಾಂಡುರಂಗ ತಂದೆ ಮಾನಯ್ಯ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನ್ಯಾಯಾಲಯದ ಆದೇಶದಿಂದ ಅದು ಪುನಃ ಗಂಗೂನಾಯಕ ರವರಿಗೆ ಬಂದಿರುತದೆ ಎಂದು ನುಡಿಯುತ್ತಾರೆ. ಪುನಃ ಗಂಗೂನಯಕ ರವರಿಗೆ ಎಷ್ಟು ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲ. ಯಾವ ಸರ್ವೆ ನಂ. ಜಮೀನಿನ ಪುನಃ ಗಂಗೂನಯಕ ರವರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಮಾಲೀಕ ಮತ್ತು ಕಬ್ಜಾದಾರರು ವಾದಿ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ಹಾಗೂ ವಾದಿಗೆ ಮಾಲೀಕತವದಿಂದಾಗಲೀ ಅಥವಾ ಕಬ್ಜೆಯಿಂದಾಗಲೀ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯ ಸಂಬಂಧಿಕನಿದ್ದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**